**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ವಾದಿ ಪರವಾಗಿ ಶ್ರೀ ಎಮ್.ಎಸ್.ಎಸ್. ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು, ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ಈ ದಾವೆಗೆ ಪೂರಕವಾಗಿ ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಈ ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.-1 ರಿಂದ 3 | ಮೊಡಿ ಭಾಷೆಯಲ್ಲಿ ಬರಲಾಗಿದೆ ಎನ್ನಲಾದ 3 ಪಹಣಿಗಳು |
| ನಿ.ಪಿ.-4 ರಿಂದ 7 | ಕೈ ಬರವಣಿಗೆಯಲ್ಲಿರುವ 4 ಪಹಣಿಗಳು |
| ನಿ.ಪಿ.-8 | ತಹಸಿಲ್ದಾರರವರಿಗೆ ಕೊಡಲಾಗಿದ್ದ ಪತ್ರದ ದೃಢೀಕೃತ ನಕಲು |
| ನಿ.ಪಿ.-9 ಮತ್ತು 10 | ನಿಪಿ-8 ಕ್ಕೆ ಲಗತ್ತಿಸಲಾಗಿದ್ದು ಎನ್ನಲಾದ ಒಪ್ಪಿಗೆ ಪತ್ರ ಮತ್ತು ಶಪಥ ಪತ್ರಗಳ ದೃಢೀಕೃತ ನಕಲು |
| ನಿ.ಪಿ.-11 | ಆರ್.ಒ.ಆರ್.ಸಂಖ್ಯೆ 164/2014-15 ರಲ್ಲಿ ಸಲ್ಲಿಸಲಾಗಿದ್ದ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ದೃಢೀಕೃತ ನಕಲು |
| ನಿ.ಪಿ.-12 | ತಹಸಿಲ್ದಾರ ಚಿಂಚೋಳಿರವರ ಆದೇಶದ ದೃಢೀಕೃತ ನಕಲು |
| ನಿ.ಪಿ.-13 ರಿಂದ 24 | 12 ಪಹಣಿಗಳು |

**ಈ ಹಂತದಲ್ಲಿ ವಾದಿ ಪರ ವಕೀಲರು ನಿಪಿ-1 ರಿಂದ 3 ರಂತೆ ಹಾಜರುಪಡಿಸಲಾಗಿರುವ ಅನ್ಯ ಭಾಷೆಯ ದಾಖಲೆಯ ತರ್ಜುಮೆಯನ್ನು ಮತ್ತು ಇತರೆ ದಾಖಲೆಗಳನ್ನು ಹಾಜರು ಪಡಿಸುವ ಸಲುವಾಗಿ ಕಾಲವಕಾಶ ಕೋರಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಗಿದೆ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**